ದಿನಾಂಕ 25-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ವಿ.ಎನ್.ಕೆ ವಕೀಲರಿಂದಃ**

1. ನಾನು 5 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ವ್ಯವಸಾಯ ಮಾಡುತ್ತೇನೆ. ನಾನು ರಾಜಕೀಯ ಮಾಡುತ್ತೇನೆ ಎಂದರೆ ಸರಿಯಲ್ಲ. 1990 ರಲ್ಲಿ ಸುಮಾರು 40 ನಿವೇಶನಗಳಿಗೆ ಸಂಬಂಧಿಸಿದಂತೆ ಪಟ್ಟಾ ನೀಡಲಾಗಿದ್ದ ಬಗ್ಗೆ ನಾನೇ ಮುಂದಾಳತ್ವ ವಹಿಸಿದ್ದೆ ಎಂದರೆ ಸರಿಯಲ್ಲ. ನಾನು ಗ್ರಾಮ ಪಂಚಾಯಿತಿ ಸದಸ್ಯನಾಗಿದ್ದೆ ಎಂದರೆ ಸರಿ. ಮೊದಲಿಗೆ ಪುರುಷರ ಹೆಸರಿನಲ್ಲಿಯೂ ಸಹ ಸರಕಾರ ಮನೆಯನ್ನು ಮಂಜೂರು ಮಾಡುವ ಯೋಜನೆ ಇದ್ದು, ಪ್ರಸ್ತುತ ಇರುವುದಿಲ್ಲ. ಮಹಿಳೆ ಹೆಸರಿನಲ್ಲಿ ಆಸ್ತಿಯು ಖಾತೆ ಇದ್ದ ಪಕ್ಷದಲ್ಲಿ ಸರಕಾರ ಮನೆಯನ್ನು ಮಂಜೂರು ಮಾಡುತ್ತದೆ ಎಂದರೆ ಸರಿ.

2. ದಾವಾ ಆಸ್ತಿಯು ಇಂದಿಗೂ ನಾಗೇಂದ್ರಪ್ಪ ಜಿಗಣಿ ರವರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ಸಂಬಂಧಪಟ್ಟ ನಿ.ಪಿ-1 ರ ಉತಾರದಲ್ಲಿ ಖುಲ್ಲಾ ಜಾಗಾ ಎಂದು ನಮೂದು ಇದೆ ಎಂದರೆ ಸಾಕ್ಷಿಯು ಸರಕಾರವು ಮನೆ ಮಂಜೂರು ಮಾಡಿದ ನಂತರ ಈಗಾಗಲೇ ವಾದಿಯು ಮನೆಯನ್ನು ಕಟ್ಟಿಕೊಂಡು ವಾಸವಿದ್ದಾಳೆ ಎಂದು ನುಡಿಯುತ್ತಾರೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಗ್ರಾಮದಲ್ಲಿ ವಾದಿಗೆ ತೊಂದರೆ ಕೊಟ್ಟ ಬಗ್ಗೆ ಪಂಚಾಯಿತಿ ಮಾಡಲಾಗಿತ್ತು ಎಂದು ಸುಳ್ಳು ಬರೆಸಲಾಗಿದೆ ಎಂದರೆ ಸರಿಯಲ್ಲ. ವಾದಿ ಮತ್ತು ನಾನು ಮಿಲಾಪಿ ಆಗಿ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ಮತ್ತು ವಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿಯು ದಾವಾ ಆಸ್ತಿಗೆ ಸಂಬಂಧಿಸಿದಂತೆ ಪಟ್ಟಾ ನೀಡಿದ್ದು ಅದರಲ್ಲಿ ವಾದಿಯು

ಮನೆಯನ್ನು ಕಟ್ಟಿಕೊಂಡು ಇರುತ್ತಾಳೆ ಎಂದು ನುಡಿಯುತ್ತಾರೆ.



**<u>ಮರು ವಿಚಾರಣೆಃಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ